# ಹರಿಯೇ ಪರದೈವ ಹರವಿರಿಂಚಾದಿಗಳು ಅವನ

**Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi

ರಾಗ ಶಂಕರಾಭರಣ ಅಟತಾಳ

ಹರಿಯೇ ಪರದೈವ || ಪ ||
ಹರವಿರಿಂಚಾದಿಗಳು ಅವನ ಸೇವಕರಯ್ಯ || ಅಪ ||

ಒಬ್ಬನು ನಮ್ಮ ಹರಿ ಒಬ್ಬೊಬ್ಬರಲ್ಲಿರುವ
ಒಬ್ಬರ ವಶವಲ್ಲ ಸರ್ವ ಸ್ವತಂತ್ರ
ಒಬ್ಬರ ನುಡಿಗಳಿಗೆ ಉಬ್ಬಿ ನಡೆದಾಡುವ
ಒಬ್ಬೊಬ್ಬರಿಗೆ ಬಲು ದೂರನಾಗುವನು || 1 ||

ಒಬ್ಬರ ಬೇಡಿಸುವ ಒಬ್ಬರಿಂದ ನೀಡಿಸುವ
ಒಬ್ಬೊಬ್ಬರಿಗೆ ಅನ್ನ ಉಣಿಸುವನೊ
ಒಬ್ಬರ ಸೇವೆಗೆ ಒಲಿದು ನಿಲ್ಲುವನಯ್ಯ
ಒಬ್ಬರ ಹಿಂದ್ಹಿಂದೆ ತಿರುಗುವನೊ || 2 ||

ಒಬ್ಬನೇ ಮಲಗಿರುವ ಆಲದ ಎಲೆ ಮೇಲೆ
ಒಬ್ಬೊಬ್ಬರನ ತನ್ನ ಉದರದಿ ಇಟ್ಟು
ಒಬ್ಬನೇ ನಿಲ್ಲುವ ಶಾಶ್ವತ ಮೂರ್ತಿ
ಒಬ್ಬನೇ ಪರದೈವ ತಂದೆ ಪುರಂದರವಿಠಲ || 3 ||

**Classification:** Keerthane
**Ankita:** tande purandara vittala
**Location:** NA
**Category:** Hari Sarvottama, bimba roopa
**Sub-Category:** Krishna, bimba, swatantra, anna, oota, Aladele, udara, hotte, daiva,
**Pravachana:** NA
**Explanation:** NA